# ಗಿರಿಧಾಮಗಳ ರಾಣಿ ಗುಲ್‌ಮಾರ್ಗ್




■ ಚಿತ್ರ– ಲೇಖನ: **ಸುಬ್ಬರಾವ್ ಎನ್. ಕೆ**

ಜಮ್ಮು ಮತ್ತು ಕಾಶ್ಮೀರ ಪ್ರಕೃತಿ ಪ್ರಿಯರ ಅತ್ಯಂತ ಇಷ್ಟದ ಪ್ರದೇಶ. ಇಲ್ಲಿನ ಶ್ವೇತಮಯ ಬೆಟ್ಟಗಳು, ಯಾವಾಗಲೂ ಹಚ್ಚ ಹಸಿರಿನಿಂದ ಕೂಡಿದ ವನಸಿರಿ ಎಂಥವರನ್ನೂ ಮಂತ್ರ ಮುಗ್ಧಗೊಳಿಸುತ್ತದೆ. ಪ್ರಸಿದ್ಧ ಮುಘಲ್ ಬಾದಶಹ ಜಹಾಂಗೀರ್‌ನು ಮೊದಲು ಹಿಮಾಲಯವನ್ನು ಸಂದರ್ಶಿಸಿದಾಗ ಇದರ ಅದ್ಭುತ ಸೌಂದರ್ಯಕ್ಕೆ ಮಾರುಹೋಗಿ ಇದನ್ನು ಭೂಮಿಯ ಮೇಲಿನ ಸ್ವರ್ಗವೆಂದೇ ಬಣ್ಣಿಸಿದ್ದನು.

ಅದ್ಭುತವಾದ ಪರ್ವತ ಶ್ರೇಣಿಗಳು, ಸ್ಫಟಿಕದಂತೆ ಶುದ್ಧವಾಗಿ ಹರಿಯುವ ನೀರಿನ ತೊರೆಗಳು, ಅಸಂಖ್ಯಾತ ಪವಿತ್ರ ದೇಗುಲಗಳು, ಹಿಮನದಿಗಳು ಮತ್ತು ಕಣ್ಣಿಗೆ ಮುದ ನೀಡುವ ಉದ್ಯಾನವನಗಳು ಎಲ್ಲವೂ ಅತ್ಯಂತ ಅದ್ಭುತವಾಗಿದ್ದು ವರ್ಷದ ಎಲ್ಲಾ ಕಾಲದಲ್ಲಿಯೂ ವಿಶ್ವದ ಮೂಲೆ ಮೂಲೆಗಳಿಂದ ಪ್ರವಾಸಿಗರನ್ನು ತಮ್ಮತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಬಾರಾಮುಲ್ಲಾ ಜಿಲ್ಲೆಯಲ್ಲಿರುವ ಪ್ರಸಿದ್ಧ ಗಿರಿಧಾಮವೇ ಗುಲ್‌ಮಾರ್ಗ್. ಹೆಸರೇ ಹೇಳುವಂತೆ ಗುಲ್‌ಮಾರ್ಗ್ ಎಂದರೆ ಪುಷ್ಪಗಳಿಂದ ಕೂಡಿದ ಪ್ರದೇಶವೆಂದರ್ಥ. ಈ ಹೆಸರನ್ನು ಸೂಚಿಸಿದ್ದು ಕಾಶ್ಮೀರದ ಕೊನೆಯ ದೊರೆ ರಾಜಾ ಯುಸೂಫ್ ಸಾಬ್.

ಈ ಗುಲ್‌ಮಾರ್ಗ್ ಸುಮಧುರವಾದ ವಾತಾವರಣದಿಂದ ಕೂಡಿದ ಅತ್ಯಾಕರ್ಷಕ ಭೂಪ್ರದೇಶ. ಹಸಿರಿನಿಂದ ಕೂಡಿದ ಉದ್ಯಾನವನದಲ್ಲಿ ಅರಳಿ ನಿಂತ ಹೂಗಳು, ದಟ್ಟವಾದ ಪೈನ್ ಮರಗಳ ಕಾಡು ಹಾಗೂ ಅತ್ಯಾಕರ್ಷಕವಾದ ಕೆರೆಗಳು ಈ ಗುಲ್‌ಮಾರ್ಗ್‌ನ ಪ್ರಮುಖ ಆಕರ್ಷಣೆಗಳು. ಈ ಗಿರಿಧಾಮದ ಇನ್ನೊಂದು ಆಕರ್ಷಣೆಯೆಂದರೆ ಇಲ್ಲಿರುವ ನಿಂಗ್ಲೆ ನಾಲಾ.